# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - MONDAY 10-10-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಬ್ರೆಜಿಲ್‌ನಲ್ಲಿ ಸೋಯಾಬೀನ್ ಉತ್ಪಾದನೆ ಹೆಚ್ಚಳ

ಒಣ ಹವೆಯ ಹೊರತಾಗಿಯೂ ಬ್ರೆಜಿಲ್‌ನಲ್ಲಿ ಸೋಯಾಬೀನ್ ಬೆಳೆ ಉತ್ತಮವಿದ್ದು, ಉತ್ಪಾದನೆ ಹಿಂದಿನ ವರ್ಷದಲ್ಲಿದ್ದುದರಿಂದ ಗಣನೀಯ ಹೆಚ್ಚಳವಾಗಲಿದೆಯೆನ್ನಲಾಗಿದೆ.

## ಮಲೇಶಿಯನ್ ಪಾಮೆಣ್ಣೆ ದಾಸ್ತಾನು 34 ತಿಂಗಳ ಗರಿಷ್ಠ ಮಟ್ಟ ಸಾಧ್ಯತೆ

ಸೆಪ್ಟೆಂಬರ್ ತಿಂಗಳ ಮಲೇಶೀಯನ್ ಪಾಮೆಣ್ಣೆ ಇನ್‌ವೆಂಟರಿ ದಾಸ್ತಾನು ಡಿಸೆಂಬರ್ 2019 ರ ನಂತರ ಹಿಂದಿನ 34 ತಿಂಗಳ ಗರಿಷ್ಠ ಮಟ್ಟ ತಲುಪುವ(2.21 ಮಿಲಿಯನ್ ಟನ್) ಸಾಧ್ಯತೆ ಇದೆಯೆಂದು ಎಸ್ ಆಂಡ್ ಪಿ ಗ್ಲೋಬಲ್ ಕಮೋಡಿಟಿ ಸರ್ವೆ ಅಂದಾಜಿಸಿದೆ.

## ಅಧಿಕ ತೇವಾಂಶ ಜೋಳ ಹೊಸ ಬೆಳೆ ದರ ಇಳಿಕೆ

ದಾವಣಗೆರೆಯಲ್ಲಿ ಹೊಸ ಬೆಳೆಯ ಜೋಳ ಅಧಿಕ ತೇವಾಂಶದಿಂದ ಕೂಡಿದ್ದರಿಂದ ದರ ಇಳಿಕೆಯಾಗಿದೆಯೆನ್ನಲಾಗಿದೆ. ಬಿಹಾರದಲ್ಲಿ ದರ ಸ್ಥಿರವಿದೆಯೆನ್ನಲಾಗಿದೆ.

## ಕೋಟಾದಲ್ಲಿ ಅಧಿಕ ಮಳೆಗೆ ಭತ್ತ, ಸೋಯಾಬೀನ್, ಜೋಳ ಬೆಳೆ ನಾಶ

ಅಧಿಕ ಮಳೆಯಿಂದಾಗಿ ಕೋಟಾ, ಬುಂದಿ, ಯಾಲಾವರ್ ಮತ್ತು ಬರನ್‌ಗಳಲ್ಲಿ ಭತ್ತ, ಸೋಯಾಬೀನ್, ಜೋಳ ಬೆಳೆಗಳು ಹೆಚ್ಚಿನ ಹಾನಿಗೊಳಗಾಗಿವೆಯೆನ್ನಲಾಗಿದೆ.

## ನೀರುಳ್ಳಿ ದರ ಸ್ವಲ್ಪ ಮಟ್ಟಿನ ಹೆಚ್ಚಳ

ಅಕ್ಟೋಬರ್, ನವೆಂಬರ್ ತಿಂಗಳಲ್ಲಿ ನೀರುಳ್ಳಿ ದರ ಪ್ರತಿವರ್ಷ ಹೆಚ್ಚಳವಾಗುವ ಪರಿಪಾಠವಿದ್ದು ಈ ವರ್ಷ ಇದುವರೆಗೆ ಅಲ್ಪ ದರ ಹೆಚ್ಚಳವಾದರೂ ತೀವ್ರ ಹೆಚ್ಚಳವಾಗಿಲ್ಲ. ದಾಸ್ತಾನು ಹಿಂದಿನ ವರ್ಷಗಳಿಗಿಂತ ಹೆಚ್ಚಳವಿರುವುದು, ನಾಫೆಡ್ ದೇಶದಾದ್ಯಂತ ದರ ನಿಯಂತ್ರಿಸಲು ತನ್ನ ದಾಸ್ತಾನಿನಿಂದ 20000 ಟನ್‌ಗಳಷ್ಟು ನೀರುಳ್ಳಿ ವಿವಿಧ ರಾಜ್ಯಗಳಲ್ಲಿ ಮಾರುಕಟ್ಟೆಗೆ ಬಿಟ್ಟುವುದರಿಂದ ಈ ವರ್ಷ ದರ ತೀವ್ರ ಹೆಚ್ಚಳವಾಗಿಲ್ಲವೆನ್ನಲಾಗಿದೆ. ಆದರೂ ಮುಂದಿನ ದಿನಗಳಲ್ಲಿ ಹೊಸ ಬೆಳೆಯ ನೀರುಳ್ಳಿ ಆವಕವಾಗುವ ತನಕ ಸ್ವಲ್ಪಮಟ್ಟಿನ ದರ ಹೆಚ್ಚಳದ ಸಾಧ್ಯತೆಯಿದೆ. ಈ ವರ್ಷ ಭಾರತದಿಂದ 1.4 ಮಿಲಿಯನ್ ಟನ್ ನೀರುಳ್ಳಿ ರಫ್ತಾಗಿದೆಯೆನ್ನಲಾಗಿದೆ. 2021–22 ರಲ್ಲಿ 31.7 ಮಿಲಿಯನ್ ಟನ್‌ಗಳ ಬಂಪರ್ ಬೆಳೆ ಉತ್ಪಾದನೆಯಾಗಿತ್ತೆನ್ನಲಾಗಿದ್ದು, ಇದರ ಹಿಂದಿನ ವರ್ಷದ ಉತ್ಪಾದನೆ 26.6 ಮಿಲಿಯನ್ ಟನ್‌ಗಳಾಗಿತ್ತೆನ್ನಲಾಗಿದೆ.

## ಎನ್.ಸಿ.ಡಿ.ಇ.ಎಕ್ಸ್ ನಲ್ಲಿ ರಾಬೆಸ್ಟಾ ಚೆರ್ರಿ ಎಬಿ ಕಾಫಿ ಫ್ಯೂಚರ್ ವ್ಯವಹಾರ ಫೆಬ್ರವರಿ 2023 ರಿಂದ ಆರಂಭ

2023 ಫೆಬ್ರವರಿ ತಿಂಗಳಿಂದ ರಾಬೆಸ್ಟಾ ಚೆರ್ರಿ ಎಬಿ ಕಾಫಿ ಫ್ಯೂಚರ್ ವ್ಯವಹಾರ ಎನ್.ಸಿ.ಡಿ.ಇ.ಎಕ್ಸ್ ನಲ್ಲಿ ಪ್ರಾರಂಭವಾಗಲಿದ್ದು ದಕ್ಷಿಣ ಭಾರತದ ಬೆಳೆಗಾರರು, ಬೆಳೆಗಾರ, ಉತ್ಪಾದಕ ಸಂಸ್ಥೆಗಳು ಇದರ ಸದುಪಯೋಗ ಪಡೆಯಲು ಎನ್.ಸಿ.ಡಿ.ಇ.ಎಕ್ಸ್ ನ ಮುಖ್ಯ ವ್ಯವಹಾರ ಅಧಿಕಾರಿ ಕೋರಿದ್ದಾರೆನ್ನಲಾಗಿದೆ.